ದಿನಾಂಕಃ 05-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ **2 ನೇ ಆರೋಪಿಯ ಪರ ಶ್ರೀ ಎನ್ ಎಂ ವಕೀಲರಿಂದಃ**

ನಾನು ವಾಸ ಮಾಡುವ ಮತ್ತು ಮೃತೆ ಅಂಜಲಿ ರವರ ಮನೆ ಬೇರೆ ಬೇರೆ ಕಡೆ ಇರುತ್ತದೆ ಅಂದರೆ ಸರಿ . ನಾನು ಮೃತೆ ಅಂಜಲಿ ರವ ರ ಮನೆಯ ಬಳಿ ಹೋಗುತ್ತಿರಲಿಲ್ಲ ಅಂದರೆ ಸರಿ. ಹಾಗೆಯೇ ಮೃತೆಯ ಮನೆಯ ಬಳಿ ಯಾರು ಯಾರು ಬಂದು ಹೋಗುತ್ತಿದ್ದರು ಮತ್ತು ಆಕೆ ಯಾರ ಯಾರ ಜೊತೆ ಸಂಪರ್ಕ ಇಟ್ಟುಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ಆಕೆ ಹೇಗೆ ಮೃತಪಟ್ಟಿರುತ್ತಾಳೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ . ಮೃತ ಅಂಜಲಿ ಸಾವಿಗೂ ಮತ್ತು ಆರೋಪಿಗಳು ಯಾವುದೇ ಸಂಬಂದವಿಲ್ಲ ಅಂದರೆ ನನಗೆ ಗೊತ್ತಿಲ್ಲ . ಮುದ್ದೆ ಮಾಲುಗಳನ್ನು ಇದೇ ಮೊದಲ ಭಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಮೃತಳು ವಾಸವಾಗಿದ್ದ ಮನೆಯಮಾಲೀಕರು ಆಗಿದ್ದರಿಂದ ಈ ದೂರು ನೀಡಿರುತ್ತೇನೆ ಅಂದರೆ ಸರಿ. ಈ ಪ್ರಕರಣದ ಆರೋಪಿಗಳನ್ನು ಪೊಲೀಸರು ನನಗೆ ತೋರಿಸಿಲ್ಲ ಅಂದರೆ ಸರಿ . ಮಹಜರ್ ಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಈ ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರು ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

- ಮರುವಿಚಾರಣೆ ಇಲ್ಲ-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

**3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
ತುಮಕೂರು